ಎಲ್ಲರೂ ಕೈಯೆತ್ತಿದರು. ಅಲ್ಲಿ ಸರಿ ಸುಮಾರಾಗಿ ನೂರರ ಮೇಲೆ ಜನರಿದ್ದರು. 'ಬಹಳ ಸಂತೋಷ' ಅಂತ ಹೇಳಿದ ಆನಂದಣ್ಣ, 'ನಾನು ಕಾರಂತರ ಹತ್ತಿರ ಮಾತಾಡಿ ಫೋನ್‌ನ ವ್ಯವಸ್ಥೆ ಮಾಡ್ತೇನೆ' ಅಂದರು.

ಶೆಟ್ಟರು ಸಮಾರಂಭದ ಕೊನೆಯ ಮಾತು ಆಡಿ ಸೀತಾಪುರ ಹಿಂದೆ ಎಂದೂ ಕಂಡು ಕೇಳದ ಅಭಿವೃದ್ಧಿ ಹೊಂದುವುದೆಂದೂ ಪ್ರತೀ ಮನೆಗೆ ಟಿ.ವಿ., ಫ್ರಿಜ್, ಬೈಕು, ಕಾರು ಇತ್ಯಾದಿ ಬರುವುದಾಗಿಯೂ ಹೇಳಿದರು. ಊರವರಿಗೆ ಶೆಟ್ಟರ ಮೇಲೆ ಭಾರೀ ನಂಬಿಕೆ ಇತ್ತು. ಸಂಜಯ್ ಹೇಳಿದ ವಿಚಾರ ಸಂಪೂರ್ಣ ಅರ್ಥವಾಗಿರಲಿಲ್ಲ. ಆದರೂ ಸೆಲ್ ಫೋನ್ ಕೊಡುವ ಪ್ರಕಟಣೆ ಎಲ್ಲರಲ್ಲೂ ಆಶೆ ಚಿಗುರಿಸಿತ್ತು.

ಜನ ಚದುರಿದ ಮೇಲೆ ಶೆಟ್ಟರು ಸಂಜಯ್ ಹತ್ತಿರ ಬಂದರು. 'ಕಾರಂತರೇ, ಎಲ್ಲ ಸರಿಯಾಯಿತು ತಾನೇ' ಅಂದರು. ಸಂಜಯ್ 'ಶೆಟ್ರೇ, ಊರವರು ನೀವು ಹೇಳಿದರೆ ಸಂಪೂರ್ಣ ಒಪ್ಪುತ್ತಾರೆ. ನಿಮ್ಮಂತಹ ಮುಖಂಡನನ್ನು ನಾನು ಎಲ್ಲೂ ನೋಡಿರಲಿಲ್ಲ. ನಿಮ್ಮ ಸಹಾಯ ಇದ್ದಲ್ಲಿ ಎಲ್ಲಾ ಸರಿಯಾಗಿ ಹೋಗುತ್ತದೆ ಅಂತ ನನಗೆ ಈಗ ನಂಬಿಕೆಯಾಗಿದೆ' ಅಂದ.

ಆನಂದಣ್ಣ 'ಕಾರಂತರೇ, ನಾನು ನಿಮಗೆ ಮೊದಲೇ ಹೇಳಿದ್ದೆ. ಶೆಟ್ಟರು ಮನಸ್ಸು ಮಾಡಿದರೆ ಏನೂ ಮಾಡ್ತಾರೆ ಅಂತ' ಅಂದರು.

ಶೆಟ್ಟರು ಇಬ್ಬರ ಮುಖವನ್ನೂ ನೋಡಿ 'ಇದರಲ್ಲಿ ನನ್ನದೇನೂ ಇಲ್ಲ, ಕಾರಂತರ ಬುದ್ಧಿವಂತಿಕೆ ನಡೆಯುವ ಹಾಗೆ ಕಾಣ್ತದೆ. ಇವತ್ತು ಸೆಲ್ ಫೋನ್ ಕೊಡುವ ಪ್ರಕಟಣೆ ಮಾಡಿ ನಾವು ಜನರ ಎಲ್ಲಾ ಪ್ರಶ್ನೆಗಳನ್ನೂ ದೂರ ಮಾಡಿದೆವು. ಈ ಪ್ರಕಟಣೆ ಮಾಡದಿದ್ದರೆ ನಾವು ಇನ್ನಷ್ಟು ಹೊತ್ತು ಜನರನ್ನು ಮನವರಿಕೆ ಮಾಡಿಕೊಂಡು ಇರಬೇಕಿತ್ತು ಕಾಣ್ತದೆ' ಅಂದರು.

'ಇಲ್ಲ ಶೆಟ್ರೇ, ನೀವು ಹೇಳಿದರೂ ನಾನು ಒಪ್ಪುವುದಿಲ್ಲ. ಇದರಲ್ಲಿ ಎರಡೂ ಇದೆ. ಜನರಿಗೆ ನಿಮ್ಮ ಮೇಲಿನ ನಂಬಿಕೆ ಮತ್ತು ಕಾರಂತರ ಸೆಲ್ ಫೋನ್ ಪ್ರಕಟಣೆ. ಏನೇ ಆಗಲಿ, ಇವತ್ತಿನ ಆರಂಭ ಬಹಳ ಚೆನ್ನಾಗಿಯೇ ಆಯಿತು' ಅಂದರು ಆನಂದಣ್ಣ.

'ಮುಂದೇನು ಕಾರಂತರೇ?' ಶೆಟ್ಟರು ಕೇಳಿದರು.

'ಶೆಟ್ರೇ, ನಮ್ಮ ಪ್ಲಾನ್ ಪ್ರಕಾರ ನಾಳೆ ನಾವು ಮಂಗಳೂರಿಗೆ ಹೋಗಿ ಇಂಟರ್ನೆಟ್ ಕಂಪನಿಗಳನ್ನು ಭೇಟಿಯಾಗಬೇಕು. ಸೀತಾಪುರದಲ್ಲಿ ಗುಡ್ಡದ ಮೇಲೆ ಒಂದು ಟವರ್ ವಾರದೊಳಗೆ ಏಳುವ ಹಾಗೆ ಆಗಬೇಕು' ಎಂದ ಸಂಜಯ್.

'ಸರಿ ಮತ್ತೆ, ನಾಳೆ ಬೆಳಗ್ಗೆ ಕಾರಂತರನ್ನು ಕರ್ಕೊಂಡು ನಾನು ನಿಮ್ಮ ಮನೆಗೆ ಬರ್ತೇನೆ. ಅಲ್ಲಿಂದ ಮಂಗಳೂರಿಗೆ ಹೋಗುವ' ಅಂದರು ಆನಂದಣ್ಣ. ಪ್ರಭಾಕರನ ಕಣ್ಣಲ್ಲಿ ಆ ಕತ್ತಲಲ್ಲೂ ಹೊಳಪು ಕಂಡಿತು. ಆನಂದಣ್ಣ ಮತ್ತು ಪ್ರಭಾಕರ, ಸಂಜಯ್ ಹಾಗೂ ಆಶಾಳನ್ನು ಶಾಸ್ತ್ರಿಗಳ ಮನೆಯಲ್ಲಿ ಬಿಟ್ಟು ಹಿಂದೆ ನಡೆದರು. ಆಶಾಳಿಗೆ ಸಂಜಯ್ ತುಂಬಾ ದೊಡ್ಡದಾಗಿ ಕಂಡು ಆತ ತನ್ನಿಂದ ದೂರ ಹೋಗುವ ಹಾಗೆ ಕಾಣತೊಡಗಿತು.

ಆರು

ಬೆಳಗ್ಗಿನ ಉಪಾಹಾರ ಮುಗಿಸಿ ಸಂಜಯ್ ಆನಂದಣ್ಣನ ಜೊತೆಗೆ ಶೆಟ್ಟರ ಮನೆಗೆ ಬಂದ. ಆಗಾಗಲೇ ಶೆಟ್ಟರು ತಮ್ಮ ಅಳಿಯ ಪ್ರಭಾಕರನ ಜೊತೆ ಹೊರಟು ನಿಂತಿದ್ದರು. ಸಂಜಯನನ್ನು ಕಂಡ ಶೆಟ್ಟರು ಸಂತೋಷದಿಂದ 'ನಮಸ್ಕಾರ ಕಾರಂತರಿಗೆ' ಅಂದರು.

ಶೆಟ್ಟರ ಮನೆಯಲ್ಲಿ ಎಳನೀರು ಕುಡಿದು ನಾಲ್ವರೂ ಸವಣೂರಿನ ಕಡೆಗೆ ಹೊರಟರು.

ಪ್ರಭಾಕರ ಸಂಜಯನ ಬ್ಯಾಗ್ ತನ್ನ ಹೆಗಲಿಗೇರಿಸಿ ಗುಡ್ಡ ಹತ್ತಲು ಪ್ರಾರಂಭಿಸಿದ್ದ. ಆದರೆ ಸಂಜಯ್ ಬೆವರಿಕೊಂಡು ಅಲ್ಲಲ್ಲಿ ನಿಂತು ಅವನ ಹಿಂದೆ ನಡೆದ. ನಾಲ್ವರೂ ಗುಡ್ಡ ದಾಟಿ ನದಿಯನ್ನೂ ದಾಟಿ ಸವಣೂರಿನ ಶೆಣೈ ಮಾಮನ ಅಂಗಡಿ ಹತ್ತಿರ ಬಂದರು. ಆಗಷ್ಟೇ ಮಂಗಳೂರಿಗೆ ಹೋಗುವ ಎಕ್ಸ್‌ಪ್ರೆಸ್ ಬಸ್ ಬಂದಿತ್ತು. ನಾಲ್ವರೂ ಬಸ್ ಹತ್ತಿ ಮಂಗಳೂರಿಗೆ ಹೊರಟರು.

ಮಂಗಳೂರಲ್ಲಿ ಇಳಿದವರೇ ಶೆಟ್ಟರು ಸಂಜಯನಲ್ಲಿ 'ಕಾರಂತರೇ, ಇಲ್ಲಿ ಎರಡು ಮೊಬೈಲ್ ಕಂಪನಿಗಳು ಇವೆ. ಒಂದು 'ನ್ಯೂಟೆಲ್' ಮತ್ತೊಂದು 'ನಿಯೋ'. ಎಲ್ಲಿಗೆ ಮೊದಲು ಹೋಗೋಣ?' ಕೇಳಿದರು.

ಸಂಜಯ್ ಸ್ವಲ್ಪ ಆಲೋಚಿಸಿ, 'ಶೆಟ್ರೆ, ನಾವು ಎರಡಕ್ಕೂ ಹೋಗಬೇಕಾಗಬಹುದು. ಆದರೆ ಯಾವುದು ಇಲ್ಲಿಗೆ ಹತ್ತಿರ ಇದೆ?' ಅಂತ ಕೇಳಿದ.

ಹತ್ತಿರ 'ನಿಯೋ' ಆಫೀಸ್ ಇದೆ ಅನ್ನುತ್ತಾ ಶೆಟ್ಟರು ಅವರನ್ನು 'ನಿಯೋ' ಆಫೀಸಿಗೆ ಕರಕೊಂಡು ಹೋದರು. ಆಫೀಸಿನ ಒಳಗೆ ಹೋದ ಶೆಟ್ಟರು ತನಗೆ ಬಿಸಿನೆಸ್ ಮ್ಯಾನೇಜರ್ ಹತ್ತಿರ ಮಾತಾಡಬೇಕು ಅಂದರು. ಅದಕ್ಕೆ ರಿಸೆಪ್ಶನ್‌ನಲ್ಲಿ ಇದ್ದ ಮೇಡಮ್ ಬಂದ ಕಾರಣವನ್ನು ಕೇಳಿ ಇಂಟರ್‌ಕಾಮ್‌ನಲ್ಲಿ ಮಾತಾಡಿ, 'ಸ್ವಲ್ಪ ಕೂತ್ಕೊಳ್ಳಿ, ಅವರು ಮೀಟಿಂಗ್‌ನಲ್ಲಿ ಇದ್ದಾರೆ' ಅಂದಳು. ಅರ್ಧ ಗಂಟೆ ಕೂತರೂ ಏನೂ ಸುದ್ದಿ ಒಳಗಿಂದ ಬರಲಿಲ್ಲ. ಶೆಟ್ಟರು ಎರಡು ಮೂರು ಬಾರಿ ನೆನಪಿಸಿದರು. ಆದರೆ ಪ್ರತಿಫಲ ಸಿಗಲಿಲ್ಲ.

ಸಂಜಯ್ ಎದ್ದು ರಿಸೆಪ್ಷನಿಸ್ಟ್ ಹತ್ತಿರ ಹೋದ. ತನ್ನ ಪಾಕೆಟ್‌ನಿಂದ ಕಾರ್ಡ್ ಒಂದನ್ನು ತೆಗೆದು ಕೊಟ್ಟು ಮ್ಯಾನೇಜರ್‌ಗೆ ನೀಡಲು ಹೇಳಿದ.

ಕಾರ್ಡ್ ಒಳಗೆ ಹೋದ ಕೂಡಲೇ ಮ್ಯಾನೇಜರ್ ಹೊರಗೆ ಬಂದರು.

'ನಿಮ್ಮಲ್ಲಿ ಸಂಜಯ್ ಕಾರಂತರು ಯಾರು?' ಎಂದು ಕೇಳಿದರು. ಸಂಜಯ್ ಎದ್ದು ನಿಂತ.

ಮ್ಯಾನೇಜರ್ ಕೈಮುಗಿದು 'ನಮಸ್ಕಾರ ಸರ್, ನೀವಿಲ್ಲಿ! ಸ್ಸಾರಿ ಸ್ಸಾರಿ... ನಿಮ್ಮನ್ನು ತುಂಬಾ ವೈಟ್ ಮಾಡಿಸಿದೆ. ಬನ್ನಿ ಬನ್ನಿ...' ಎನ್ನುತ್ತಾ ಸಂಜಯ್ ಮತ್ತು ಉಳಿದವರನ್ನೂ ಒಳಗೆ ಕರೆದರು. ಶೆಟ್ಟರು ಮತ್ತು ಆನಂದಣ್ಣ ಪರಸ್ಪರ ಮುಖ ನೋಡಿಕೊಂಡರು. ಸಂಜಯ್ ಎಲ್ಲಿ, ಈ ಮಂಗಳೂರಿನ ಮ್ಯಾನೇಜರ್ ಎಲ್ಲಿ... ಈ ಮ್ಯಾನೇಜರ್ ಸಂಜಯನಿಗೆ ಇಷ್ಟು ಗೌರವ ಕೊಡುತ್ತಾನೆ ಎಂದು ಇಬ್ಬರೂ ಎಣಿಸಿರಲಿಲ್ಲ.

ಕಾಫಿ, ಟೀ ಆದನಂತರ ಮ್ಯಾನೇಜರ್ ಸಂಜಯನನ್ನು ಇಲ್ಲಿ ಏನು ಕೆಲಸಕ್ಕೆ ಬಂದಿದ್ದೀರಿ ಅಂತ ಕೇಳಿದರು.

ಸಂಜಯ್ ತಾನು ಸೀತಾಪುರಕ್ಕೆ ಬಂದ ಉದ್ದೇಶ, ಸೀತಾಪುರದಲ್ಲಿ ಮಾಡಲಿರುವ ಪರಿವರ್ತನೆ, ತನ್ನ ಸ್ಪಾನ್ಸರಿಂಗ್ ಕಂಪನಿಗಳು, ಜಗತ್ತಿನಾದ್ಯಂತ ಈ ವಿಷಯ ಪ್ರಚಾರವಾಗಿರುವ ವಿಷಯ ಇತ್ಯಾದಿ ಹೇಳಿದ. ತನ್ನ ಪ್ರಾಜೆಕ್ಟ್ ಪ್ರಕಾರ ತಾನು ಐವತ್ತು ಮೊಬೈಲ್ ಕನೆಕ್ಷನ್ ಅನ್ನು ಒಮ್ಮೆಗೇ ಖರೀದಿಸುವುದಾಗಿ ಹೇಳಿದ. ತನ್ನ ಒಟ್ಟಿಗೆ ಬಂದ ಜನರನ್ನು ಪರಿಚಯಿಸಿದ. ನಂತರ ಮ್ಯಾನೇಜರ್ ಕಡೆ ತಿರುಗಿ 'ನಿಮ್ಮ ನಿಯೋ ಸೀತಾಪುರದಲ್ಲಿ ಟವರ್ ಹಾಕಿ ಇಂಟರ್ನೆಟ್ ಸಂಪರ್ಕ ಕೊಡಬಹುದೇ?' ಎಂದೂ ಕೇಳಿದ.

ಮ್ಯಾನೇಜರ್ ಸಂಜಯನನ್ನು ನೋಡಿ, 'ಖಂಡಿತ, ನಮ್ಮ ದೇಶದಲ್ಲಿ ಈಗ ದೇಶದ ಮೂಲೆಮೂಲೆಗೆ ಯಾರಾದರೂ ಕನೆಕ್ಷನ್ ಕೊಡುವುದಿದ್ದರೆ ಅದು ನಮ್ಮ ಕಂಪನಿ ಮಾತ್ರ...' ಎನ್ನುತ್ತಾ ತನ್ನ ಕಂಪನಿಯನ್ನು ವೈಭವೀಕರಿಸತೊಡಗಿದ.

ಸಂಜಯ್ 'ಮ್ಯಾನೇಜರ್ ಅವರೇ, ನಮಗೆ ಟವರ್ ವಾರದೊಳಗೇ ಆಗಬೇಕು. ಅದಕ್ಕೆ ಎಷ್ಟು ಖರ್ಚು ಆಗಬಹುದು? ಹೇಳಿ. ನಿಮ್ಮ ಭೇಟಿಯ ನಂತರ ನಾನು 'ನ್ಯೂಟೆಲ್' ಕಂಪನಿಗೆ ಹೋಗುತ್ತಿದ್ದೇನೆ. ಯಾರು ಕಡಿಮೆ ಖರ್ಚಿನಲ್ಲಿ ಬೇಗ ಹಾಕುತ್ತಾರೋ ಅವರ ಜೊತೆಗೆ ನಾವು ಹೋಗುತ್ತೇವೆ. ಹಾಗೇ ಈ ಮೊಬೈಲ್ ಕಂಪನಿ ನಮ್ಮ ಶೋನಲ್ಲಿ ತೋರಿಸಲ್ಪಡುತ್ತದೆ. ಅದನ್ನು ಈ ಸ್ಥಳದ ನಂಬರ್ 1 ಕಂಪನಿಯಾಗಿ ತೋರಿಸುತ್ತೇವೆ. ಅದೇ ತರಹ ಕಂಪನಿ ಟವರ್ ಹಾಕುವುದನ್ನು ನಮ್ಮ ಶೋನಲ್ಲಿ 'ಲೈವ್' ಆಗಿ ತೋರಿಸುತ್ತೇವೆ. ಇದು ನಿಮ್ಮ ಕಂಪನಿಗೆ ಸುವರ್ಣಾವಕಾಶ' ಅಂದ.

ಮ್ಯಾನೇಜರ್ ಒಂದು ಕ್ಷಣ ಆಲೋಚನೆಗೆ ತೊಡಗಿದ. 'ಈಗ ಬಂದೆ' ಎನ್ನುತ್ತಾ ಇನ್ನೊಂದು ರೂಮಿಗೆ ಹೋಗಿ ಅಲ್ಲಿನವರ ಜೊತೆ ಮಾತಾಡಿ ಹಿಂದೆ ಬಂದ.

'ಕಾರಂತರೇ, ನಾನು ನನ್ನ ಬಾಸ್ ಹತ್ತಿರ ಮಾತಾಡಿದೆ. ನಮಗೆ ನಿಮ್ಮ ಶೋನಲ್ಲಿ ಬರಬೇಕಾಗಿದೆ. ನಾವು ಟವರ್ ವಾರದೊಳಗೇ ಹಾಕುತ್ತೇವೆ. ನೀವು ನಮಗೇನೂ ಚಾರ್ಜ್ ಕೊಡಬೇಕಾಗಿಲ್ಲ. ನಿಮ್ಮ ಶೋನಲ್ಲಿ ನಿಯೋ ಬಗ್ಗೆ ಒಳ್ಳೆ ಮಾತಾಡ್ಬೇಕು ಅಷ್ಟೇ' ಎಂದು ಹೇಳಿದರು.

ಸಂಜಯ್ 'ಬಹಳ ಸಂತೋಷ. ನಾವು ಈ ಹಿಂದಿನ ಪ್ಲಾನ್ ಪ್ರಕಾರ 'ನ್ಯೂಟೆಲ್' ಆಫೀಸಿಗೆ ಹೋಗಿ ಹಿಂದೆ ಬರುವಾಗ ನಿಮ್ಮಲ್ಲಿ ಬರ್ತೇವೆ. ಆಗ ಫೈನಲ್ ಆಗಿ ನನ್ನ ಒಪ್ಪಿಗೆ ನೀಡುತ್ತೇನೆ' ಎಂದ.

ಮ್ಯಾನೇಜರ್‌ಗೆ ಸ್ವಲ್ಪ ಗಾಬರಿ ಆಯಿತು. 'ಕಾರಂತರೇ, ನೀವು ಪುನಃ ನ್ಯೂಟೆಲ್ ಆಫೀಸಿಗೆ ಯಾಕೆ ಹೋಗ್ಬೇಕು? ನಿಮಗೆ ಏನು ಬೇಕು ನಾವೇ ಕೊಡ್ತೇವಲ್ಲ?' ಕೇಳಿದರು. ಸಂಜಯ್ 'ನಮಗೆ ನೂರು ಸ್ಮಾರ್ಟ್‌ಫೋನ್ ಖರೀದಿಸಬೇಕಾಗಿದೆ. ಅದರಲ್ಲಿ ಐವತ್ತಕ್ಕೆ ನನ್ನಲ್ಲಿ ಬಜೆಟ್ ಇದೆ. ಉಳಿದ ಫೋನಿಗೆ ಯಾರಾದರೂ ಪ್ರಾಯೋಜಕರು ಬೇಕಾಗಿದ್ದಾರೆ' ಅಂದ.

(ಸಶೇಷ)